ಹವ್ಯಾಸ ಇಲ್ಲದೇ, ಟೀವಿಯಲ್ಲಿ ಪ್ರಸಾರವಾಗುವ ಜಾಹೀರಾತು ಹಾಗೂ ಸೀರಿಯಲ್‌ಗಳನ್ನಷ್ಟೇ ನೋಡಿ, ವಾರ್ತೆ ಶುರು ಆದಕೂಡಲೇ ಟೀವಿ ಸ್ವಿಚ್ ಆಫ್ ಮಾಡುವ ಸರಸ್ವತಿಗೆ ಈ ಫೇಸ್‌ಬುಕ್ ಒಂದು ಜ್ಞಾನದ ಕಣಜವಾಗಿ ಪೊರೆಯತೊಡಗಿದ್ದನ್ನು ಶಂಕರ ಬಹುಸೂಕ್ಷ್ಮವಾಗಿ ಅವಲೋಕಿಸುತ್ತಿದ್ದ.

ಹಲವು ಜನರ ಮಿಚುವಲ್ ಫ್ರೆಂಡ್‌ಗಳಿದ್ದ ಯಾವು ಯಾವುದೋ ಸಾಹಿತಿಗಳ, ಕಲಾಕಾರರ, ಸಿನಿಮಾ ಜನರ ಸ್ನೇಹ ಸಂಪಾದಿಸುತ್ತ ಇದ್ದಲ್ಲೇ ಅವಳ ಮಿತ್ರ ಬಳಗ ಹೆಚ್ಚಿದುದಲ್ಲದೇ, ಅವರ ಸ್ಫೂರ್ತಿಯಿಂದ ಸಣ್ಣ ಸಣ್ಣ ಕವನಗಳನ್ನೂ ಸರಸ್ವತಿ ಬರೆಯಲು ಆರಂಭಿಸಿದ್ದಳು. ಇತ್ತೀಚೆಗೆ ಅಲ್ಲಲ್ಲಿ ನಡೆವ ಹನಿಗವನ ಗೋಷ್ಠಿಗಳಿಗೂ ಅವಳಿಗೆ ಕರೆಬರತೊಡಗಿತ್ತು. ಚುಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಸಹ ಪರಿಚಯವಾಗಿ 'ನೀನು ದಿನಕರ ದೇಸಾಯರನ್ನು ಓದಬೇಕು, ಡುಂಡಿರಾಜರನ್ನು ಓದಬೇಕು' ಅಂತ ತಿಳಿ ಹೇಳಿದ್ದಕ್ಕಾಗಿ, ಅಂಥ ಪುಸ್ತಕಗಳಿಗಾಗಿ ಸರಸ್ವತಿ ಆಗಾಗ ಸಾಹಿತಿಗಳ ಮನೆಗಳಿಗೂ ಭೇಟಿಕೊಡತೊಡಗಿದ್ದಳು. 'ನೀನು ಚುಟಕ ಬರೆವುದನ್ನು ಬಿಟ್ಟು ದೊಡ್ಡ ಕವಿತೆ ಬರೆಯಬೇಕು, ಕತೆ ಬರೆಯಬೇಕು' ಅಂತ ಬುದ್ಧಿ ಹೇಳಿದ ಹಿರಿಯ ಸಾಹಿತಿಗಳಿಗೆ 'ಮೊದಲು ಮಿನಿಗವನದಲ್ಲಿ ಚಾಂಪಿಯನ್ ಆಗ್ತೇನೆ ಸರ್, ನಂತರ ದೊಡ್ಡದು' ಅಂತ ಅವರಿಗೇ ತಿರುಗೇಟು ಕೂಡ ನೀಡುತ್ತಿದ್ದಳು.

ಹುಬ್ಬಳ್ಳಿ ಕಲ್ಚರಲ್ ಹಿಸ್ಟರಿ ಎಂಬ ಗ್ರೂಪ್ ಅಂತೂ ಇಡೀ ಹುಬ್ಬಳ್ಳಿ ತಾಲೂಕಿನಲ್ಲಿ ನೋಡುವಂಥ ಸ್ಥಳಗಳು ಯಾವುವು? ಆ ಸ್ಥಳನಾಮಗಳ ಪ್ರಸಿದ್ಧಿ ಏನು? ಮತ್ತು ಅದರ ಫೋಟೊಗಳು ಪ್ರಕಟವಾಗುತ್ತಿದ್ದು, ಎಲ್ಲವನ್ನೂ ಸರಸ್ವತಿ ಚಾಚೂ ತಪ್ಪದೇ ಶಂಕರನೊಂದಿಗೆ ಹಂಚಿಕೊಳ್ಳುತ್ತಿದ್ದಳು. ಭಾನುವಾರದ ದಿನಗಳಲ್ಲಿ ಸರಸ್ವತಿಯನ್ನು ಅಂಥ ಜಾಗೆಗೆ ಕರೆದೊಯ್ಯಲು ಕೂಡ ಶಂಕರನಿಗೆ ಸಹಕಾರಿಯಾಗುತ್ತಿತ್ತು. ಮತ್ತು ಸರಸ್ವತಿಯ ಬುದ್ಧಿ ಹಾಗೂ ಮನಸ್ಸು ವಿಕಾಸಗೊಳ್ಳಲು ಆರಂಭಿಸಿದ್ದೇ 'ಹುಬ್ಬಳ್ಳಿ ಮಂದಿ' ಗ್ರೂಪ್ಪಿಗೆ ಸದಸ್ಯೆಯಾದ ನಂತರ ಎಂದು ಶಂಕರನಿಗೂ ಕ್ರಮೇಣ ಮನವರಿಕೆಯಾಗಿತ್ತು. ಫೇಸ್‌ಬುಕ್ ತುಂಬಾ ನಾನಾ ರೀತಿಯ ವಿಚಾರಧಾರೆಯ ವ್ಯಕ್ತಿಗಳೂ ಗುಂಪುಗಳೂ ಇದ್ದುದರಿಂದ ಸರಸ್ವತಿಗೂ ಅದು ದಕ್ಕಲಿ ಎಂಬ ಆಲೋಚನೆಯೂ ಅವನಿಗಿತ್ತು.

ಸತ್ಯ ಹರಿಶ್ಚಂದ್ರ ಹುಬ್ಬಳ್ಳಿಯ ರಸ್ತೆ ಹೊಂಡಗಳ ಕುರಿತಾಗಿಯೂ ವಿನೋದಪೂರ್ಣ ಫೋಟೊ ಹಾಕಿದ್ದನ್ನು ಸರಸ್ವತಿ ತುಂಬ ಉತ್ಸಾಹದಿಂದ ಹೇಳುತ್ತಿದ್ದಳು. ಅದು ಅಂದಿನ ದಿನ ಪತ್ರಿಕೆಯಲ್ಲಿ ಬಂದಿದ್ದು ಅದರ ಫೋಟೊ ತೆಗೆದು ಆತ ಅಪ್‌ಲೋಡ್ ಮಾಡಿದ್ದನ್ನು ಶಂಕರ ಸರಸ್ವತಿಗೆ ತೋರಿಸಿದ್ದ. ಹುಬ್ಬಳ್ಳಿಯ ಬಹುಮುಖ್ಯ ರಸ್ತೆಯಾದ ಕೊಪ್ಪೀಕರ ರಸ್ತೆಯಲ್ಲಿ ನಡೂಮಧ್ಯೆ ದೊಡ್ಡ ದೊಡ್ಡ ಹೊಂಡಗಳು ನಿರ್ಮಾಣವಾಗಿದ್ದು, ಮಳೆಗಾಲದಲ್ಲಿ ಅದರ ತುಂಬ ನೀರು ತುಂಬಿಕೊಂಡು ರಸ್ತೆಯ ಮಧ್ಯೆಯೇ ಹಳ್ಳಗಳ ನಿರ್ಮಾಣವಾದದ್ದನ್ನು ವ್ಯಂಗ್ಯವಾಗಿ ಹೇಳುವಂತೆ, ಫೋಟೊದಲ್ಲಿ ಈಜುಡುಗೆ ತೊಟ್ಟ ವ್ಯಕ್ತಿಗಳಿಬ್ಬರು ಇನ್ನೇನು ಸ್ವಿಮಿಂಗ್ ಪೂಲಲ್ಲಿ ಹಾರುವಂತೆ ನಿಂತ ಫೋಟೊಗಳು ಅವಳ ಮನ ಸೆಳೆದಿದ್ದವು. ಇನ್ನೊಂದರಲ್ಲಿ ರಸ್ತೆಗಳಿಗೆ ಗಾಯವಾಗಿದೆ, ಅದನ್ನು ಚಿಕಿತ್ಸೆ ಮಾಡುವಂತೆ ಅದರ ಸುತ್ತ ವೈದ್ಯರ ಸಮವಸ್ತ್ರದಲ್ಲಿರುವ ಕೆಲ ವ್ಯಕ್ತಿಗಳು ಆಪರೇಷನ್ನಿನ ಹತಾರುಗಳನ್ನು ಹಿಡಿದು ನಿಂತಿರುವ ಫೋಟೊಗಳನ್ನು ನೋಡಿದ್ದೇ ಬಿದ್ದು ಬಿದ್ದು ನಕ್ಕಿದ್ದಳು. ಅದನ್ನು ಸೇವ್ ಮಾಡಿಟ್ಟುಕೊಂಡು ಗಂಡನಿಗೂ ತೋರಿಸಿ ಮನೆಗೆ ಬಂದವರಿಗೆಲ್ಲ ತೋರಿಸಿ ಅಚ್ಚರಿ ಹಂಚಿಕೊಂಡಿದ್ದಳು. 'ಹುಬ್ಬಳ್ಳಿ ಮಂದಿ ತಂಡ'ದಲ್ಲಿ ಈ ಫೋಟೊ ಹರಿದಾಡಿದ